**ಸಾಕ್ಷಿಯನ್ನು ದಿನಾಂಕ: 09-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ :- ವಾದಿ ಪರ ವಕೀಲರಿಂದಃ**

ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-1 ಎಂದು, ಮುದ್ದಮ್ಮ ರವರ ಮರಣ ಪ್ರಮಾಣ ಪತ್ರವನ್ನು ನಿಪಿ-2 ಎಂದು, ಸರ್ವೆ ನಂ.36, 1/2, 42/2, 3/2, 5/2, 9/1, 10/6, 8, 4/1, 147, 148, 149, 150, 106, 42/4, 42/1, 42/3, 62/1, 62/2 ರ ಪಹಣಿಗಳನ್ನು ನಿಪಿ-3 ರಿಂದ 21, ಎಂ.ಆರ್.ನಂ.ಹೆಚ್-3/2021-22, 11/2006-07 ಮತ್ತು 9/2006-07 ರ ಪ್ರತಿಗಳನ್ನು ನಿಪಿ-22 ರಿಂದ 24 ಎಂದು, ಇ.ಎಸಿ. ಯನ್ನು ನಿಪಿ-25 ಎಂದು, ದಿನಾಂಕಃ 03-09-2021 ರ ವಿಭಾಗ ಪತ್ರದ ನಕಲನ್ನು ನಿಪಿ-26 ಎಂದು, ತಿಳುವಳಿಕೆ ನೋಟಿಸನ್ನು ನಿಪಿ-27 ಎಂದು, 2 - ಅಂಚೆ ರಶೀದಿಗಳನ್ನು ನಿಪಿ-28 ಮತ್ತು 29 ಎಂದು, 2 – Track Consignment ವರದಿಯನ್ನು ನಿಪಿ-30 ಮತ್ತು 31 ಎಂದು ಗುರುತಿಸಲಾಯಿತು.

**(**ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**